ಶ್ರೀ ಕೆ.ಹೆಚ್. ರಂಗನಾಥ್ : ಗುಂಡು ಹಾಕುತ್ತೇವೆ ಅಂದರೆ ಈಗ ಬೇರೆ ಅರ್ಥವಾಗುತ್ತದೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಆ ಕಾರಣದಿಂದ, ಈ ಕಾಂಪನ್ಸೇಷನ್ ವಿಚಾರ ಏನಿದೆ, ಅದನ್ನು ಸ್ವಲ್ಪ ಈ ಕಾಲಕ್ಕೆ ತಕ್ಕ ಹಾಗೆ ಸುಧಾರಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಇದು ಏತಕ್ಕೆ ಹೇಳುತ್ತಿದ್ದೇನೆಂದರೆ, ಸರ್ಕಾರಿ ಆನೆ ಎಂದು ಉದ್ದೇಶಪೂರ್ವಕವಾಗಿ ಹೇಳಿದ್ದು, ನಮ್ಮ ಹಳ್ಳಿಗಾಡಿನಲ್ಲಿರುವ ರೈತರಿಗೆ ನ್ಯಾಯಾಲಯಕ್ಕೆ ಹೋಗಿ ಪರಿಹಾರ ಪಡೆಯುವಂತಹ ಶಕ್ತಿ ಇಲ್ಲ. ಬೇರೆ ದೇಶದಲ್ಲಿ ಆಗಿದ್ದರೆ, ಲಕ್ಷಾಂತರ ರೂಪಾಯಿ ನಿಮ್ಮಿಂದ ವಸೂಲು ಮಾಡುತ್ತಿದ್ದರು.

ಶ್ರೀ ಎಸ್. ಬಂಗಾರಪ್ಪ : ಬೇರೆ ದೇಶದಲ್ಲಿ ಕೊಡತಕ್ಕಂಥ ಶಕ್ತಿ ಇದೆ, ಅವರು ವಸೂಲು ಮಾಡತಕ್ಕ ಶಕ್ತಿ ಇದೆ; ಅವರು ವಸೂಲು ಮಾಡಿಕೊಳ್ಳುತ್ತಾರೆ. ನಮ್ಮಲ್ಲಿ ಆ ಪರಿಸ್ಥಿತಿ ಇಲ್ಲ. ಆದರೂ ಕೂಡ ನಮ್ಮ ಸರ್ಕಾರದ ಕಾಡಿನ ಆನೆಗಳು ಜನರನ್ನು ತುಳಿಯುತ್ತವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಇನ್ನು ಖಾಸಗಿ ಆನೆಗಳು, ಏನಾದರೂ ತುಳಿದರೆ, ಅದನ್ನು ಸಾಕಿದವರು ಕಾಂಪನ್ಸೇಷನ್ ಕೊಟ್ಟುಕೊಳ್ಳುತ್ತಾರೆ. ಮಾನ್ಯ ಸದಸ್ಯರ ಸಲಹೆ ಯೋಗ್ಯವಾದುದು. ಕಾಂಪನ್ಸೇಷನ್ ಜಾಸ್ತಿ ಕೊಡಲಿಕ್ಕೆ ಮಾನ್ಯ ಸದಸ್ಯರು ಸಲಹೆ ಕೊಟ್ಟಿದ್ದಾರೆ. ನಿಜವಾಗಿ ಹೇಳಬೇಕಾದರೆ ಅದು ಹಳೆಯ ರೇಟು. ಅದರ ಬಗ್ಗೆ ಆಮೂಲಾಗ್ರವಾಗಿ ಪರೀಶೀಲನೆ ಮಾಡಬೇಕೆಂದು ನನ್ನ ಭಾವನೆ ಇದೆ. ಬೆಂಕಿ ಒಂದೇ ಅಲ್ಲ, ಆನೆ ತುಳಿಯುಂತಾದ್ದು ಒಂದೇ ಅಲ್ಲ. ನಾಳೆ ಮತ್ತೊಂದು ಬೇರೆ ಕಾಂಪನ್ಸೇಷನ್ ಆದರೂ ಅದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ.

ಶ್ರೀ ಎಂ.ಪಿ. ವೆಂಕಟೇಶ್ : ಈಗ ಆನೆಗಳು ಹತ್ತು ಸಾವಿರ ರೂಪಾಯಿಗಳ ಬೆಳೆ ನಾಶ ಮಾಡಿದರೂ ಸಹ 300 ರೂ.ಗಳ ಪರಿಹಾರ ಸಿಗುತ್ತದೆ. ಇದನ್ನು ಸಹ ಜಾಸ್ತಿ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಸಿ.ಓ.ಡಿ. ತನಿಖೆಗಳು

1332 – ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ), ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ವರ್ಷ ರಾಜ್ಯದ ಸಿ.ಓ.ಡಿ.ಯಿಂದ ತನಿಖೆ ಮಾಡಲ್ಪಟ್ಟ ಪ್ರಕರಣಗಳ ಸಂಖ್ಯೆ ಎಷ್ಟು. ಈ ಪ್ರಕರಣಗಳು ಯಾವುವು?

ಆ) ಈ ವಿಭಾಗದಿಂದ ತನಿಖೆ ಮಾಡಲ್ಪಟ್ಟ ಎಷ್ಟು ಪ್ರಕರಣಗಳು ಸಾಬೀತಾಗಿವೆ?

ಇ) ಈ ವಿಭಾಗವನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಆಧುನೀಕರಿಸಿ ಬಲಪಡಿಸುವ ಕಾರ್ಯಕ್ರಮವನ್ನೇನಾದರೂ ಸರ್ಕಾರ ರೂಪಿಸಿದೆಯೇ?

ಈ) ರೂಪಿಸಿದ್ದಲ್ಲಿ ಆ ಕಾರ್ಯಕ್ರಮಗಳು ಯಾವುವು?

ಉ) ಇದಕ್ಕಾಗಿ ವೆಚ್ಚ ಮಾಡಲು ಉದ್ದೇಶಿಸಿರುವ ಹಣವೆಷ್ಟು?

ಶ್ರೀ ಧರ್ಮಸಿಂಗ್, (ಗೃಹಮಂತ್ರಿಗಳು)

ಅ) 686

ತನಿಖೆ ಮಾಡಲಾದ ಪ್ರಕರಣಗಳು ಈ ಕೆಳಗಿನಂತಿವೆ :

1.	ಖೋಟಾನೋಟು ಮತ್ತು ಆಯುಧ ಕಾನೂನಿನ ಅಪರಾಧಗಳು	300
2.	ವಂಚನೆ ಪ್ರಕರಣಗಳು	126
3.	ವಿಶೇಷ ವಿಚಾರಣೆ ಪ್ರಕರಣಗಳು	27

4.	ಚೌರ್ಯ ಮತ್ತು ನರಹತ್ಯೆ ಪ್ರಕರಣಗಳು	68
5.	ವರದಕ್ಷಿಣೆ ಸಾವು ಮತ್ತು ಇತರ ಅಪರಾಧಗಳು (ಕಿರುಕುಳ)	162
6.	ಡಕಾಯಿತಿ ಅಪರಾಧಗಳು	3
		686

ಆ) 665 ಪ್ರಕರಣಗಳಲ್ಲಿ ಅಪರಾಧ ಸಾಬೀತಾಗಿ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ.

ಇ) ಹೌದು.

ಈ) ತನಿಖಾ ದಳದ ಸಿಬ್ಬಂದಿ ವರ್ಗವನ್ನು ಹೆಚ್ಚಿಸುವುದು ಮತ್ತು ಪುನರ್ ವ್ಯವಸ್ಥೆ ಮಾಡುವುದು, ಹೊಸ ಮಾದರಿಯ ಪ್ರಕರಣಗಳ ಪತ್ತೆಗಾಗಿ ಹೊಸ ತಂಡಗಳನ್ನು ನಿರ್ಮಿಸುವುದು ಮತ್ತು ಅಗತ್ಯ ಆಧುನಿಕ ಸಲಕರಣೆಗಳನ್ನೂ, ವಾಹನ ಸೌಲಭ್ಯಗಳನ್ನು ಒದಗಿಸುವುದು, ವಿಧಿ ವಿಜ್ಞಾನ ಶಾಲೆಗೆ ಆದುನಿಕ ಸಲಕರಣೆಗಳನ್ನು ಒದಗಿಸುವುದು, ಹೀಗೆ ಸಿ.ಓ.ಡಿ. ವಿಭಾಗವನ್ನು ಉತ್ತಮವಾಗಿ ಬಲಗೊಳಿಸುವ ಪ್ರಸ್ತಾವಣೆಗಳು ಸರ್ಕಾರದ ಪರಿಶೀಲನೆಯಲ್ಲಿವೆ.

ಉ) ರೂ. 1,67,44,332

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಈ ಸಿ.ಓ.ಡಿ ಇವೊತ್ತಿನ ದಿವಸ ಏನಾಗಿದೆ ಅಂದರೆ, ಯಾವ ಪೋಲೀಸ್ ಅಧಿಕಾರಿಗಳ ಮೇಲೆ ಸರ್ಕಾರದ ವಿಶ್ವಾಸ ಇಲ್ಲ; ಅಥವಾ ಯಾವ ಅಧಿಕಾರಿಗಳು ಸರ್ಕಾರದ ಕಾನ್‌ಫಿಡೆನ್ಸ್‌ನಲ್ಲಿ ಇಲ್ಲ; ಅಂತಹ ಅಧಿಕಾರಿಗಳಿಗೆ ಪೋಸ್ಟ್ ಮಾಡುವ ಒಂದು ಸಂಸ್ಥೆಯಾಗಿದೆ. ಇವೊತ್ತು ಮಾನ್ಯ ಸಚಿವರ ಗಮನಕ್ಕೆ ಒಂದು ವಿಚಾರ ತರುತ್ತೇನೆ. ಈ ಒಂದು ಇಲಾಖೆಯ ಮೊರೇಲ್ ಹೋಗಿಬಿಟ್ಟಿದೆ. ಸಿಓಡಿಗೆ ಪೋಸ್ಟ್ ಆದರೆ ಅದು ಪನಿಷ್ಮೆಂಟ್ ಎಂದು ತಿಳಿದುಕೊಳ್ಳುತ್ತಾರೆ. ಯಾವುದೇ ಸರ್ಕಾರದ ಬದಲಾವಣೆಯಾದನಂತರ ಯಾವ ಜನರು ಎಕ್ಸಿಕ್ಯುಟೀವ್‌ನಲ್ಲಿ ಇರುತ್ತಾರೆ ಅವರೆಲ್ಲ ಸಿಓಡಿಗೆ ಹೋಗುತ್ತಾರೆ. ಆದ್ದರಿಂದ, ಇವೊತ್ತು ಈ ಸಿಓಡಿ ಇಲಾಖೆ ಯ್ಯಾವ ಪ್ರಕಾರ ಆಗಬೇಕೆಂದರೆ, ಸಿಬಿಐ ಗೆ ತನ್ನದೇ ಆದ ಒಂದು ಇಂಪಾರ್ಟೆನ್ಸ್ ಏನಿದೆ, ರೆಕಗ್ನಿಷನ್ ಏನಿದೆ, ಒಂದು ಸ್ಟೇಟಸ್ ಏನಿದೆ, ಅದೇ ತರಹ ಒಂದು ಸ್ಟೇಟಸ್ ಇದರಲ್ಲಿ ತರಲಿಕ್ಕೆ ಪ್ರಯತ್ನ ಮಾಡುತ್ತೀರಾ? ಇನ್ನು ಎರಡನೆಯದಾಗಿ, ಇಲ್ಲಿ ಪೋಸ್ಟ್ ಮಾಡುವಾಗ ತಾವು ಒಳ್ಳೆಯ ಅಧಿಕಾರಿ ಹಾಕಲಿಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ಇನ್ನು ಮೂರನೆಯದಾಗಿ ಯಾವ ಅಧಿಕಾರಿಯನ್ನು ತಾವು ಪೋಸ್ಟ್ ಮಾಡುತ್ತೀರಿ, ಅವರಿಗೆ ಹೆಚ್ಚಿನ ಎನ್‌ಕರೇಜ್‌ಮೆಂಟ್ ಕೊಡಲಿಕ್ಕೆ ಸರ್ಕಾರದಿಂದ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಈ ದೃಷ್ಟಿಯಿಂದ ಈ ಬಗ್ಗೆ ಏನು ಪ್ರಯತ್ನ ಮಾಡುತ್ತೀರಾ ಎಂದು ನಾನು ಕೇಳುತ್ತೇನೆ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಗೆಳೆಯರಾದ ದೇಶಪಾಂಡೆಯವರಿಗೆ ಏನು ಅನುಮಾನ ಇದೆ ಅದು ನನಗೆ ಕಾಣಿಸುತ್ತಿಲ್ಲ. ಏಕೆಂದರೆ ಕರ್ನಾಟಕ ರಾಜ್ಯದಲ್ಲಿ ಸಿ.ಓ.ಡಿ. ಇಲಾಖೆ ನನಗೆ ತಿಳಿದ ಮಟ್ಟಿಗೆ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ. ಅವರಿಗೆ ಎಲ್ಲೆಲ್ಲಿ ಅನಾನುಕೂಲಗಳಿವೆ ಅವನ್ನೂ ಕೂಡ ಸರ್ಕಾರ ಪರಿಹರಿಸಿಕೊಡುವ ಪ್ರಯತ್ನ ಮಾಡುತ್ತದೆ. ಇವತ್ತು ಸಿ.ಓ.ಡಿ.ಯವರು ತನಿಖೆ ಮಾಡುವುದಕ್ಕೆ ಸರ್ಕಾರ ಆದೇಶ ಕೊಟ್ಟಾಗ, ರೆಗ್ಯುಲರ್ ಪೋಲೀಸ್ ಸ್ಟೇಷನ್‌ಗೆ ಹೋಗಬೇಕಾಗುತ್ತದೆ. ಅವರಿಗೆ ಜೀಪಿನ ವ್ಯವಸ್ಥೆ ಇರಲಿಲ್ಲ. ಇವತ್ತು ನಾವು ಎಲ್ಲ ರೀತಿಯ ಅವರಿಗೆ ವ್ಯವಸ್ಥೆ ಮಾಡಿದ್ದೇವೆ. ತನಿಖೆ ಮಾಡುವುದಕ್ಕೆ ಯಾವ ಯಾವ ತನಿಖಾದಳಗಳಿಗೆ ಏನೇನು ಸೌಕರ್ಯಗಳನ್ನು ಒದಗಿಸಿಕೊಡಬೇಕಾಗಿತ್ತೋ ಅದನ್ನು

ಇದುವರೆಗೂ ಒದಗಿಸಿಕೊಟ್ಟಿರಲಿಲ್ಲ. ಈಗ ಅದನ್ನೆಲ್ಲಾ ಒದಗಿಸಿಕೊಡುವುದಕ್ಕೆ ಸರ್ಕಾರ 1.47 ಕೋಟಿ ರೂಪಾಯಿ ವೆಚ್ಚದ ಒಂದು ಪ್ಲಾನನ್ನು ತಯಾರಿಸಿದ್ದೇವೆ. ಈ ವರ್ಷ ಈ ತನಿಖಾ ದಳಗಳಿಗೆ ಬೇಕಾದಂಥ ಉಪಕರಣಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ನಮಗೆ ಕಾನ್‌ಫಿಡೆನ್ಸ್ ಕೂಡ ಇದೆ. ಅವರು ಕೆಲಸ ಮಾಡುತ್ತಿದ್ದಾರೆ. ಎಲ್ಲೆಲ್ಲಿ ಎಫೆಕ್ಟೀವ್ ಆಗಿ ಕೆಲಸ ಮಾಡುತ್ತಿಲ್ಲವೆಂದು ನಮ್ಮ ಗಮನಕ್ಕೆ ಬರುತ್ತದೆ, ಕೂಡಲೇ ಅಲ್ಲಿ ಅವರು ಸರಿಯಾಗಿ ಕೆಲಸ ಮಾಡುವುದಕ್ಕೆ ಆದೇಶವನ್ನು ಕೊಡುತ್ತಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಸಭಾಧ್ಯಕ್ಷರೇ, ವೆಹಿಕಲ್ಸನ್ನು ಕೊಡತಕ್ಕ ವ್ಯವಸ್ಥೆ ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ; ಬಹಳ ಸಂತೋಷ. ಈ ವರ್ಷ ಎಷ್ಟು ವೆಹಿಕಲ್ಸ್ ಈ ಇಲಾಖೆಗೆ ಖರೀದಿ ಮಾಡುತ್ತೀರಿ? ಎರಡನೆಯದಾಗಿ ಈ ಇಲಾಖೆಯವರು ಏನಾದರೂ ಇನ್ವೆಸ್ಟಿಗೇಷನ್ ಮಾಡಬೇಕಾದರೆ ಬೆಂಗಳೂರಿಗೇ ಅಧಿಕಾರಿಗಳು ಬರಬೇಕಾಗುತ್ತದೆ. ಎಲ್ಲ ಅಧಿಕಾರಿಗಳೂ ಬೆಂಗಳೂರಿನಲ್ಲೇ ಇರುತ್ತಾರೆ. ಆದುದರಿಂದ, ಈ ಇಲಾಖೆಯನ್ನು ಡೀ ಸೆಂಟ್ರಲೈಸ್ ಮಾಡಿ ಪ್ರತಿಯೊಂದು ಜಿಲ್ಲಾ ಕೇಂದ್ರಗಳಲ್ಲೂ ಸಿ.ಒ.ಡಿ. ಕಚೇರಿಗಳನ್ನು ತೆರೆದು ಅಲ್ಲಿಗೆ ಅಧಿಕಾರಿಗಳನ್ನು ಪೋಸ್ಟ್ ಮಾಡತಕ್ಕ ವ್ಯವಸ್ಥೆ ಮಾಡುತ್ತೀರಾ ಎಂದು ಕೇಳಬಯಸುತ್ತೇನೆ.

ಶ್ರೀ ಧರ್ಮಸಿಂಗ್: 1991-91ರಲ್ಲಿ ಹೆಚ್ಚಿಗೆ ವೆಹಿಕಲ್‌ಸ್‌ನ್ನು ತೆಗೆದುಕೊಳ್ಳುವುದಕ್ಕೆ ನಿರ್ಧಾರವನ್ನು ತೆಗೆದುಕೊಂಡಿದ್ದು, ಈಗಾಗಲೇ 1 ಕೋಟಿ ರೂಪಾಯಿ ಬೆಲೆಯ ವೆಹಿಕಲ್ಸ್‌ನ್ನು ಖರೀದಿಸಿ ಅವರಿಗೆ ಕೊಟ್ಟಿದ್ದೇವೆ. ಈ ಇಲಾಖೆಗೆ ಇನ್ನೂ ಹೆಚ್ಚಿನ ಎಸ್.ಪಿ.ಗಳು, ಡಿವೈ.ಎಸ್.ಪಿ.ಗಳು ಬೇಕಾಗಿದೆ. ಏಕೆಂದರೆ ಎಲ್ಲರೂ ಬೆಂಗಳೂರಿಗೆ ಬಂದು ತನಿಖೆಯನ್ನು ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಜಿಲ್ಲಾ ಮಟ್ಟದಲ್ಲಿ ಕೂಡ ಇದಕ್ಕೆ ಅವಶ್ಯಕವಾದ ಸಿಬ್ಬಂದಿ ವರ್ಗವನ್ನು ಹೆಚ್ಚು ಮಾಡಬೇಕೆಂದು ಈಗಾಗಲೇ ಸರ್ಕಾರ ಕ್ರಮವನ್ನು ತೆಗೆದುಕೊಂಡಿದೆ ಎನ್ನತಕ್ಕ ಮಾತನ್ನು ತಮ್ಮ ಮುಖಾಂತರ ಹೇಳಬಯಸುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ದೇಶಪಾಂಡೆಯವರು ಹೇಳಿದಂತೆ ಸಿ.ಒ.ಡಿಯಲ್ಲಿರತಕ್ಕ ಅಧಿಕಾರಿ ಯಾರು ಎಂದರೆ ಯಾರಿಗೂ ಬೇಡದವನು ಎಂದು. ಏಕೆಂದರೆ ಯಾರಿಗೂ ಬೇಕಿಲ್ಲದವರನ್ನು ಅಲ್ಲಿಗೆ ಹಾಕುತ್ತಾರೆ. ಅವರಿಗೆ ವಿಶೇಷ ಸಂಬಳವನ್ನೇನಾದರೂ ಕೊಡುತ್ತೀರಾ? ಈ ವಿಚಾರ ಸರ್ಕಾರದ ಮುಂದಿದೆಯೇ? ಕಾರಣ ಏನೆಂದರೆ, ಅಲ್ಲಿ ಲಂಚ ಜಾಸ್ತಿ ಸಿಕ್ಕುವುದಿಲ್ಲ. ಆದುದರಿಂದ ಅಲ್ಲಿರುವವರಿಗೆ ವಿಶೇಷ ವ್ಯವಸ್ಥೆಯನ್ನು ಮಾಡತಕ್ಕ ಕಾರ್ಯಕ್ರಮ ಏನಾದರೂ ಇದೆಯೇ?

ಶ್ರೀ ಧರ್ಮಸಿಂಗ್ : ಅಂಥಾದ್ದು ಏನೂ ಇಲ್ಲ. ಮೊದಲಿನಿಂದಲೂ ಸಿ.ಒ.ಡಿ. ಇಲಾಖೆಯಲ್ಲಿ ಕೆಲಸ ಮಾಡುತ್ತಿರುವವರೇ ಮುಂದುವರಿಸಿಕೊಂಡು ಬರುತ್ತಿದ್ದಾರೆ. ಈಗ ಎಲ್ಲೆಲ್ಲಿ ಚೆನ್ನಾಗಿ ಕೆಲಸ ಮಾಡುವುದಿಲ್ಲ, ಅಲ್ಲಿ ಅವರು ಚೆನ್ನಾಗಿ ಕೆಲಸ ಮಾಡುವಂತೆ ಆದೇಶ ಕೊಡುತ್ತಿದ್ದೇವೆ; ಮತ್ತು ಚೆನ್ನಾಗಿ ಯಾರು ಕೆಲಸ ಮಾಡುತ್ತಾರೆ ಅಂಥವರನ್ನು ಸಿ.ಒ.ಡಿ.ಗೆ ಹಾಕುತ್ತೇವೆ.

ಶ್ರೀ ಕೆ.ಹೆಚ್. ರಂಗನಾಥ್ : ಸಿ.ಒ.ಡಿ.ಗೆ ಸಬ್ ಇನ್‌ಸ್ಪೆಕ್ಟರ್‌ಗಳನ್ನು, ಇನ್‌ಸ್ಪೆಕ್ಟರ್‌ಗಳನ್ನು ಡಿ.ವೈ.ಎಸ್.ಪಿ.ಯವರನ್ನು ಹಾಕುವಾಗ ಯೋಚನೆ ಮಾಡಿ ಹಾಕಬೇಕು. ಇವತ್ತು ತಾಲೂಕು ಮಟ್ಟದಲ್ಲಿ ಲಾ ಅಂಡ್ ಆರ್ಡರ್ ಪೋಸ್ಟ್‌ಗೆ ಬಹಳ ರಷ್ ಇರುತ್ತದೆ. ಇದಕ್ಕೆ ಯಾರೂ ಹೋಗುವುದಿಲ್ಲ ಎಂದು, ಅಲ್ಲದೆ ಬೇಡವಾದವರನ್ನು ಹಾಕುವಂಥ ಪರಿಪಾಠವಿದೆ. ಈ ಪರಿಪಾಠವನ್ನು ಬದಲಾವಣೆ ಮಾಡುವುದಕ್ಕೆ ಸರ್ಕಾರ ಏನಾದರೂ ಒಂದು ನೀತಿಯನ್ನು ಹಾಕಿಕೊಳ್ಳುತ್ತದೆಯೇ? ತಮ್ಮ ಸರ್ವೀಸ್ 30

ವರ್ಷ ಮುಗಿಸುವುದರೊಳಗೆ ಇಂತಿಷ್ಟು ದಿವಸ ಅಲ್ಲಿ ಕೆಲಸ ಮಾಡಲೇಬೇಕೆಂಬ ರೀತಿಯಲ್ಲಿ ಏನಾದರೂ ವ್ಯವಸ್ಥೆಯನ್ನು ಮಾಡಲಿಕ್ಕೆ ಸಾಧ್ಯವೇ?

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಹಿರಿಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಇವತ್ತಿನ ಪರಿಸ್ಥಿತಿಯಲ್ಲಿ ಸಿ.ಒ.ಡಿ.ಗೆ ಹೆಚ್ಚಿನ ಮಹತ್ವವನ್ನು ನಾವು ಕೊಡಬೇಕಾಗಿದೆ. ಇದರ ಹಿನ್ನೆಲೆಯಲ್ಲಿ ಇದಕ್ಕೆ ಹೆಚ್ಚಿನ ಗಮನವನ್ನು ಕೊಡುತ್ತೇನೆಂದು ಹೇಳಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಅನೇಕ ಪ್ರಕರಣಗಳಲ್ಲಿ ಸಿ.ಒ.ಡಿ.ಯವರು ಸ್ವತಂತ್ರವಾಗಿ ತನಿಖೆ ಮಾಡಿ ವರದಿಗಳನ್ನು ಸರ್ಕಾರಕ್ಕೆ ಕಳುಹಿಸಿಕೊಡುತ್ತಾರೆ. ಸಿ.ಒ.ಡಿ ಯವರು ಅನೇಕ ವರದಿಗಳನ್ನು ನಿಮ್ಮ ಸರ್ಕಾರದಲ್ಲಿ ಬಂದು ಕೂತಿವೆ. ಒಂದು ವರ್ಷದಲ್ಲಿ ಕೊಟ್ಟಿರತಕ್ಕಂಥ ಪ್ರಕರಣಗಳ ವರದಿ ಎಷ್ಟು ಎಂದು ಮಾನ್ಯ ಸದಸ್ಯರಾದ ದೇಶಪಾಂಡೆಯವರು ಕೇಳಿದ್ದಾರೆ. ಸಿ.ಒ.ಡಿ.ಯಿಂದ ತನಿಖೆಯಾಗಿರತಕ್ಕ ಅನೇಕ ವರದಿಗಳು ಸರ್ಕಾರದಲ್ಲಿ ಯಾವ ಹಂತದಲ್ಲಿವೆ, ಯಾವ ಮೂಲೆಯಲ್ಲಿವೆ ಎಂಬುದು ಗೊತ್ತಿಲ್ಲ. ಅವರು ಕೊಟ್ಟ ವರದಿಗಳನ್ನು ಚಾಚೂ ತಪ್ಪದೆ ಕಾರ್ಯಗತ ಮಾಡುವಂಥ ಧೈರ್ಯಸ್ಥೈರ್ಯ ಈ ಸರ್ಕಾರಕ್ಕಿದ್ದರೆ, ತನಿಖೆಯನ್ನು ಮಾಡಿದಂಥ ಸಿ.ಒ.ಡಿ ಇಲಾಖೆಗೂ ಒಂದು ಗೌರವ ಬರುತ್ತದೆ. ಇತ್ತೀಚೆಗೆ ಅನೇಕ ವಿಚಾರಗಳ ಬಗ್ಗೆ ಸಿ.ಒ.ಡಿ.ಯಿಂದ ತನಿಖೆ ಮಾಡಿಸಿ ಎಂದು ನಾವು ಏತಕ್ಕೆ ಹೇಳುತ್ತೇವೆಂದರೆ, ಸಿ.ಒ.ಡಿ. ಬಗ್ಗೆ ನಮಗೆ ಅಪಾರ ಗೌರವವಿದೆ. ಅವರಿಗಿರುವ ಈ ಘನತೆ, ಗೌರವಗಳನ್ನು ಉಳಿಸುವ ಸಲುವಾಗಿ ಅವರು ಅನೇಕ ಪ್ರಕರಣಗಳಿಗೆ ಸಂಬಂಧಪಟ್ಟಂತೆ ತನಿಖೆಯನ್ನು ನಡೆಸಿ ವರದಿಗಳನ್ನು ಸರ್ಕಾರಕ್ಕೆ ಏನು ಕೊಟ್ಟಿದ್ದಾರೆ, ಆ ವರದಿಗಳ ಬಗ್ಗೆ ಯಾವುದೇ ಕ್ರಮವನ್ನೂ ಕೈಗೊಳ್ಳದೇ ಅವೆಲ್ಲವೂ ಮೂಲೆಗುಂಪಾಗಿ ಬಿದ್ದಿವೆ. ಇದರ ಬಗ್ಗೆ ತಾವು ಏನು ಹೇಳುತ್ತೀರಿ?

ಶ್ರೀ ಧರ್ಮಸಿಂಗ್: ಅವರು ಕೊಟ್ಟ ವರದಿ ಮೇಲೆ ಮುಂದಿನ ಕ್ರಮಕ್ಕಾಗಿ ಅದನ್ನು ಸಿ.ಒ.ಡಿ.ಗೆ ನಾವು ಕಳುಹಿಸಿಕೊಟ್ಟಿದ್ದೇವೆ. ಸಿ.ಒ.ಡಿ.ಯವರು ಕೇಸನ್ ಎಸ್ಟಾಬ್ಲಿಷ್ ಮಾಡಿ ಕೋರ್ಟಿಗೆ ಕಳುಹಿಸಿದ್ದಾರೆ. ಸರ್ಕಾರ ಇದರ ಬಗ್ಗೆ ಹಸ್ತಕ್ಷೇಪ ಏನೂ ಮಾಡುತ್ತಿಲ್ಲ. ಏಕೆಂದರೆ ಅವರು ನಿಷ್ಪಕ್ಷಪಾತವಾಗಿ ತನಿಖೆ ಮಾಡುವುದಕ್ಕೆ ನಾವು ಅವರಿಗೆ ಪರವಾನಿಗೆಯನ್ನು ಕೊಟ್ಟಿದ್ದೇವೆ. ಅದರ ಪ್ರಕಾರ ತನಿಖೆ ನಡೆಯುತ್ತಿದೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ: ಮಾನ್ಯ ಅಧ್ಯಕ್ಷರೇ ಅದು ರೀತಿಯ ಪ್ರಕರಣಗಳಿಗೆ ಸಂಬಂದಪಟ್ಟಹಾಗೆ ತನಿಖೆ ನಡೆದಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ ಇದರಲ್ಲಿ ಮೂರನೆಯದು ವಿಶೇಷ ವಿಚಾರಣೆ ಪ್ರಕರಣಗಳು ಎಂದು ಹೇಳಿದೆ. ಇನ್ನು ಬೇರೆ ಐದು ರೀತಿಯ ನಿರ್ದಿಷ್ಟವಾದ ಅಪರಾದಗಳನ್ನು ಸೂಚಿಸಿದ್ದಾರೆ. ಈ ವಿಶೇಷ ವೀಚಾರಣಾ ಪ್ರಕರಣಗಳು ಯಾವುವು? ನನಗೆ ಗೊತ್ತಿರುವ ಹಾಗೆ ಇಬ್ಬರು ಕುಲಪತಿಗಳ ಬಗ್ಗೆ ತನಿಖೆಯಾಗಿದೆ ಎಂದು ನನಗೆ ವರದಿ ಬಂದಿದೆ. ಅದು ಇದರಲ್ಲಿ ಸೇರಿದೆಯೇ? ಶ್ರೀ ಧರ್ಮಸಿಂಗ್: ಈಗ ನಿಗದಿಪಡಿಸಿದಂತಹ 6 ಪ್ರಕಣಗಳನ್ನು ಸಿ.ಒ.ಡಿ. ಅವರ ತನಿಖೆಗೆ ಒಳಪಡಿಸಿದ್ದೇವೆ. ತಾವು ಹೇಳಿದಹಾಗೆ ವಿಶೇಷ ಪ್ರಕರಣಗಳು ಏನಿವೆ ಆ ವಿಶೇಷ ಪ್ರಕರಣಗಳನ್ನೂ ಕೂಡ ಇದರಲ್ಲಿ ಸೇರಿಸಿದೆ.

ಪ್ರೋ ಎಂ.ಡಿ. ನಂಜುಂಡಸ್ವಾಮಿ: ಮಾನ್ಯ ಅಧ್ಯಕ್ಷರೇ ನಾನು ಕುಲಪತಿಗಳ ಬಗ್ಗೆ ಕೇಳಿದ್ದು ಅದು ತನಿಖೆ ಆಗಿದೆ ಎಂದು ಕೇಳಿದ್ದೇನೆ ಅದು ಇದರಲ್ಲಿ ಸೇರಿದೆಯೇ?

ಶ್ರೀ ಧರ್ಮಸಿಂಗ್: ಅದನ್ನು ಪರಿಶೀಲನೆ ಮಾಡಿ ನೋಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಅದಕ್ಕಾಗಿಯೇ ವರದಿಗಳೆಲ್ಲ ಮೂಲೆಗುಂಪಾಗಿದೆ ಎಂದು ನಾವು ಹೇಳಿದ್ದು ಅದು ಬಿಟ್ಟು ಬೇರೆ ಪ್ರಶ್ನೆ ಏನೂ ಇಲ್ಲ

ಶ್ರೀ ಧರ್ಮಸಿಂಗ್: ವಿವರವಾದ ನೋಟನ್ನು ಈ ಬಗ್ಗೆ ನನ್ನ ಉತ್ತರದಲ್ಲಿ ಕೊಟ್ಟಿದ್ದೇನೆ.

ಅಧ್ಯಕ್ಷರು: ಶ್ರೀ ಆರ್.ಎಲ್. ಜಾಲಪ್ಪ: ಶ್ರೀ ಕೆ.ಡಿ. ಪ್ರಭುಕುಮಾರ್ (ಮಾನ್ಯ ಸದಸ್ಯರುಗಳು ಗೈರುಹಾಜರಾಗಿದ್ದರು)

ಮದ್ಯಸಾರ ಭಟ್ಟಿ ಇಳಿಸುವ ಕಾರ್ಖಾನೆಗಳಿಗೆ ಪರವಾನಿಗೆ ನೀಡಿರುವುದು

454 – ಶ್ರೀ ಸಿ ಬೈರೇಗೌಡ (ವೇಮಗಲ್) ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಿನಾಂಕ 1-11-90 ರವರೆಗೆ ಲೈಸನ್ಸ್ ನೀಡಲಾದ ಡಿಸ್ಟಿಲರಿಗಳ ಸಂಖ್ಯೆ ಎಷ್ಟು (ಅವುಗಳ ಹೆಸರುಗಳನ್ನು ನೀಡಿ)

ಆ) ಇವುಗಳಲ್ಲಿ ಕಾಕಂಬಿ ಆಧಾರಿತ ಮತ್ತು ಕಾಕಂಬಿಯೇತರ ಡಿಸ್ಟಿಲರಿಗಳ ಸಂಖ್ಯೆ ಎಷ್ಟು (ಅವುಗಳ ಹೆಸರುಗಳನ್ನು ನೀಡಿ)

ಇ) ಪ್ರತಿಯೊಂದು ಡಿಸ್ಟಿಲರಿಗಳು ಉತ್ಪಾದಿಸಿದ ಮದ್ಯಸಾರದ ಪ್ರಮಾಣ ಎಷ್ಟು?

ಈ) ಕಾಕಂಬಿ ಆಧಾರಿತ ಮತ್ತು ಕಾಕಂಬಿಯೇತರ ಕಚ್ಚಾ ವಸ್ತುಗಳಿಂದ ಉತ್ಪಾದಿಸುವ ಮದ್ಯಸಾರವನ್ನು ಉಪಯೋಗಿಸಿ ಭಾರತೀಯ ಮದ್ಯಗಳನ್ನು ಉತ್ಪಾದಿಸುವ ಎಷ್ಟು ಡಿಸ್ಟಿಲರಿಗಳಿಗೆ ಲೈಸನ್ಸ್ ನೀಡಲಾಗಿದೆ (ಅವುಗಳ ಹೆಸರನ್ನು ತಿಳಿಸಿ)

ಉ) ಕಾಕಂಬಿಯೇತರ ಕಚ್ಚಾವಸ್ತುಗಳಿಂದ ಉತ್ಪಾದಿಸಲಾದ ಮದ್ಯಸಾರವನ್ನು ಉಪಯೋಗಿಸಿಕೊಂಡು ಭಾರತೀಯ ಮದ್ಯಗಳನ್ನು ತಯಾರಿಸಲು ಲೇಸೆನ್ಸ್ ಪಡೆದ ಕೆಲವು ಡಿಸ್ಟಿಲರಿಗಳಿಗೆ ಕಾಕಂಬಿ ಆಧಾರಿತ ಮದ್ಯಸಾರವನ್ನು ನೀಡಲಾಗಿದೆಯೇ (ಅಂತಹ ಡಿಸ್ಟಿಲರಿಗಳ ಹೆಸರುಗಳು ಮತ್ತು ಹಂಚಿಕೆ ಮಾಡಲಾದ ಮದ್ಯಸಾರದ ಪ್ರಮಾಣ ಮತ್ತು ಹಂಚಿಕೆಯ ಕಾರಣಗಳನ್ನು ನೀಡಿ)

ಶ್ರೀ ಕೆ ಶಿವಮೂರ್ತಿ, (ಅಬಕಾರಿ ರಾಜ್ಯ ಸಚಿವರು.)

ಒಟ್ಟು ಡಿಸ್ಟಿಲರಿಗಳು - 27 (ಪಟ್ಟಿಯನ್ನು ಅನುಬಂಧ-1ರಲ್ಲಿ ಲಗತ್ತಿಸಲಾಗಿದೆ)

ಅ) ಕಾಕಂಬಿ ಆಧಾರಿತ 20

ಆ) ಕಾಕಂಬಿಯೇತರ 7
(ಪಟ್ಟಿಯನ್ನು ಅನುಬಂಧ -2 ರಲ್ಲಿ ಲಗತ್ತಿಸಲಾಗಿದೆ)

ಅನುಬಂದ - 3 ರಲ್ಲಿ ತೋರಿಸಲಾಗಿದೆ.

ಐ.ಎಂ.ಎಲ್. ಡಿಸ್ಟಿಲರಿಗಳು:

ಅ) ಕಾಕಂಬಿ ಆಧಾರಿತ 28

ಆ) ಕಾಕಂಬಿಯೇತರ 8
(ಪಟ್ಟಿಯನ್ನು ಅನುಬಂಧ - 4 ರಲ್ಲಿ ಲಗತ್ತಿಸಿದೆ)

ಹೌದು ಅವುಗಳಂದರೆ:

1. ಮೆ. ಹೆಚ್.ದಾಸಪ್ಪ ಅಂಡ್ ಸನ್ಸ್ (ಪ್ರೈ) ನಿಯಮಿತ 6 00,000 ಲೀಟರ್‌ಗಳು
2. ಮೆ. ಹೆಚ್.ಇ. ಡಿಸ್ಟಿಲರಿ(ಪ್ರೈ) ನಿಯಮಿತ ಶಿವಮೊಗ್ಗ 2,24,000 ಲೀಟರ್‌ಗಳು.

ರಾಜ್ಯದ ಅದಾಯ ಹಿತದೃಷ್ಟಿಯಿಂದ ಸರ್ಕಾರವು ನಿರ್ಣಯಿಸಿದಂತೆ ಸ್ಥಳೀಯ ಮದ್ಯ ತಯಾರಿಕಾ ಲೈಸನ್ಸ್‌ದಾರರಿಗೆ ಪೂರೈಕೆ ಆದ ನಂತರ ಹೆಚ್ಚುವರಿಯಾಗಿ ಉಳಿಯುವ ಕಾಕಂಬಿ ಮತ್ತು ಮದ್ಯಸಾರವನ್ನು ಮೌಲ್ಯ ಹೆಚ್ಚು ತರುವ ವಸ್ತುಗಳನ್ನಾಗಿ